ಸಿಸಿ ನಂ.65/2022 ಪಿಡಬ್ಲೂ :1

ದಿನಾಂಕಃ 19-09-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಆರೋಪಿಯ ಪರವಾಗಿಃ ಶ್ರೀ ಎಸ್ ಆರ್ ಎಸ್ ವಕೀಲರಿಂದಃ**

7. ನಾನು ಯಾವ ಕಾರಣಕ್ಕಾಗಿ ಆರೋಪಿಗೆ ಹಣವನ್ನು ನೀಡಿದ್ದೆ ನನ್ನ ಫಿರ್ಯಾದಿನಲ್ಲಿ ಆಗಲಿ ನೋಟೀಸ್ ನಲ್ಲಾಗಲಿ , ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಾಗಲಿ ಹೇಳಿಕೊಂಡಿಲ್ಲ ಎಂದರೆ ಸಾಕ್ಷಿ ನೆನಪಿಗೆ ಬರುತ್ತಿಲ್ಲ ಎಂದು ನುಡಿದಿರುತ್ತಾರೆ. ನಾನು ಆರೋಪಿಗೆ ಹಣವನ್ನು ನೀಡದೇ ಇರುವುದ್ದರಿಂದ ನನಗೆ ಕಾರಣವನ್ನು ನೆನಪಿಸಿಕೊಳ್ಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ . ನನ್ನ ವ್ಯವಹಾರದ ಬಗ್ಗೆ ನಾನು ಫಿರ್ಯಾದಿನಲ್ಲಿ ಅಥವಾ ನೋಟೀಸ್ ನಲ್ಲಿ ಎಲ್ಲಿಯೂ ಹೇಳಿಕೊಂಡಿಲ್ಲ ಎಂದರೆ ಸಾಕ್ಷಿ ಬಿಸಿನೆಸ್ ಎಂದು ಹೇಳಿದ್ದೇನೆ ಎಂದು ನುಡಿದಿರುತ್ತಾರೆ . ನಾನು ಯಾವ ಬಿಸಿನೆಸ್ ಮಾಡುತ್ತಿದ್ದೇನೆ ಆ ಬಗ್ಗೆ ಯಾವುದೇ ದಾಖಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ . ಮುಂದಿನ ದಿನಾಂಕದಲ್ಲಿ ಹಾಜರುಪಡಿಸುತ್ತೇನೆ. ನಾನು ನಿಖರವಾಗಿ ಯಾವುದೇ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ . ಈ ಹಣದ ವಸೂಲಾತಿಗಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ವ್ಯವಹಾರಕ್ಕೆ ಸಂಬಂಧಪಟ್ಟಂತೆ ಒಂದು ವೇಳೆ ಆರೋಪಿಯ ಪರಿಚಯ ಇದ್ದರೇ ವ್ಯವಹಾರ ಮಾಡಿದ್ದರೆ ಅವರಿಂದ ಕರಾರುಪತ್ರ ಅಥವಾ ದಾಖಲಾತಿಯನ್ನು ಬರೆಸಿಕೊಳ್ಳಬೇಕಿತ್ತು ಎಂದರೆ ಸಾಕ್ಷಿ ವಿಶ್ವಾಸದ ಮೇಲೆ ಕೊಟ್ಟಿದ್ದೇನೆಂದು ಸಾಕ್ಷಿ ನುಡಿಯುತ್ತಾರೆ. ವಿಶ್ವಾಸ ಎಂಬ ಪದವನ್ನು ನಾನು ನ್ಯಾಯಾಲಯದಲ್ಲಿ ದುರುಪಯೋಗ ಪಡಿಸಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ . ಆರೋಪಿಯ ಜೊತೆಗೆ ಚೆಕ್ ನ ವ್ಯವಹಾರ ಮಾಡಿದ ಬಗ್ಗೆ ಚೆಕ್ ನ್ನು ಹೊರತುಪಡಿಸಿ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನೋಟೀಸ್ ನ್ನು ಹಾಜರುಪಡಿಸಿದ್ದೇನೆಂದು ನುಡಿದಿರುತ್ತಾರೆ. ನಾನು ಆರೋಪಿಯ ಜೊತೆಗೆ ಯಾವುದೇ ವ್ಯವಹಾರ

ಮಾಡಿಲ್ಲದ ಕಾರಣ ಹಾಗೂ ಆರೋಪಿ ನನಗೆ ಯಾವುದೇ ಚೆಕ್ ನ್ನು ಕೊಟ್ಟಿಲ್ಲದ ಕಾರಣ ನಾನು ಚೆಕ್ ನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನ್ಯಾಯಾಲಯಕ್ಕೆ ಬೇಕಾದರೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಿದ್ಧನಿದ್ದೇನೆಂದು ನುಡಿದಿರುತ್ತಾರೆ. ನ್ಯಾಯಾಲಯದ ಆದೇಶಿಸಿದರೆ ಹಣ ಕೊಟ್ಟ ಬಗ್ಗೆ ದಾಖಲಾತಿ ಹಾಜರುಪಡಿಸಲು ಸಿದ್ಧನಿದ್ದೇನೆ . ಸಾಕ್ಷಿ ಬ್ಯಾಂಕಿನಿಂದ ಹಣ ವಿಥ್ಡ್ರಾವ್ ಮಾಡಿದ ದಾಖಲಾತಿ ಹಾಜರುಪಡಿಸುತ್ತೇನೆಂದು ನುಡಿದಿರುತ್ತಾರೆ . ಹಣವನ್ನು ನಾನೇ ಡ್ರಾವ್ ಮಾಡಿದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸುತ್ತೇನೆ . ಆರೋಪಿಗೆ ರೂ.3,00,000/- ನೀಡಿದ್ದೇನೆಂದು ಹೇಳಿದ ಹಣವನ್ನು ಡ್ರಾವ್ ಮಾಡಿದ ಬಗ್ಗೆ ದಾಖಲಾತಿ ಹಾಜರುಪಡಿಸಲು ಬದ್ಧನಿದ್ದೇನೆಂದರೆ ಸರಿ. ನನಗೆ ಬ್ಯಾಂಕಿನ ವ್ಯವಹಾರದ ಬಗ್ಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸಾಕ್ಷಿ ಸಾಮಾನ್ಯ ಜ್ಞಾನ ಇದೆ ಎಂದು ನುಡಿದಿರುತ್ತಾರೆ . ಸಮಾಜದಲ್ಲಿ ಯಾವ ರೀತಿ ವ್ಯವಹಾರ ಮಾಡಿದರೆ ಸೂಕ್ತ ಎಂಬುವ ಬಗ್ಗೆ ನನಗೆ ವ್ಯವಹಾರದ ಜ್ಞಾನ ಇದೆ ಎಂದು ನುಡಿಯುತ್ತಾರೆ. ನಾನು 2018 ರಿಂದ ಆದಾಯ ತೆರಿಗೇ ಪಾವತಿ ಮಾಡುತ್ತಿದ್ದೇನೆ. ಪ್ರತಿಯೊಂದು ವ್ಯವಹಾರದ ಬಗ್ಗೆ ನಾನು ನನ್ನ ಇನಕಮ್ ಟ್ಯಾಕ್ಸ ರಿಟನ್ಸನಲ್ಲಿ ತೋರಿಸಲು ಬದ್ಧನಾಗಿರುತ್ತೇನೆ ಎಂದರೆ ಸಾಕ್ಷಿ ಹೆಸರು ತೋರಿಸಿಲ್ಲ ಆದರೆ ಇಂತಿಷ್ಟು ಅಮೌಂಟ್ ಎಂದು ತೋರಿಸಿದ್ದೇನೆಂದು ನುಡಿದಿರುತ್ತಾರೆ . ವಿಶ್ವಾಸವನ್ನು ಹೊರತುಪಡಿಸಿ, ಹಣವನ್ನು ಚೆಕ್ ಹಾಗೂ ನೆಫ್ಟ ಮೂಲಕ ಹಣವನ್ನು ಕೊಡಬಹುದಿತ್ತು ಎಂದರೆ ಸಾಕ್ಷಿ ಕೊಡಬಹುದಿತ್ತು, ಆದರೆ ಅವರು ನಗದಾಗಿ ಬೇಕು ಎಂದು ಹೇಳಿದ್ದರಿಂದ ನಗದಾಗಿ ಹಣವನ್ನು ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ . ಆರೋಪಿ ನನ್ನಿಂದ ಯಾವುದೇ ನಗದು ಹಣ ಪಡೆದಿಲ್ಲ , ನಾನು ಆರೋಪಿಗೆ ಹಣವನ್ನು ಪಾವತಿಸಿದ್ದರೆ ನೆಫ್ಟ ಅಥವಾ ಚೆಕ್ ಮೂಲಕ ಕೊಡುತ್ತಿದ್ದೆ ಎಂದರೇ ಸಾಕ್ಷಿ ಅವರು ನಗದು ಕೇಳಿದ್ದರಿಂದ ನಾನು ನಗದು ಹಣವನ್ನು ನೀಡಿದ್ದೇನೆ ಎಂದು ನುಡಿದಿರುತ್ತಾರೆ . ನಾನು ಆರೋಪಿಗೇ ನಗದಾಗಿ ಹಣವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲವನ್ನು ಮುಂದೂಡಲು ಕಾಲಾವಕಾಶ ಕೇಳಿದ್ದರಿಂದ ಮುಂದುವರೆದ ಪಾಟೀ ಸವಾಲವನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.